ವಿಶಾಖ ಎನ್.



# ತೌಬ ನೃತ್ಯ ಸತ್ಯ

'ಹುಸ್ನ್ ತೆರಾ ತೌಬ...' ಹಾಡು ಈಗ ರೀಲ್ಸ್ ತುಂಬಾ ಇಡುಕಿರಿದಿದೆ. ನೃತ್ಯಮೋಹಿಗಳಿಗೆ ಅದರ ಹುಕ್ ಸ್ಟೆಪ್ ಈಗ ಅಚ್ಚುಮೆಚ್ಚು. ಬ್ಯಾಡ್ ನ್ಯೂಸ್ ಸಿನಿಮಾದ ಈ ಟ್ರೆಂಡಿ ಹಾಡಿಗೆ ವಿಕ್ಕಿ ಕೌಶಲ್ ಮಾಡಿರುವ ನೃತ್ಯಕ್ಕೆ ಶಹಬ್ಬಾಸ್‌ಗಿರಿ ಸಲ್ಲುತ್ತಿದೆ.

ಬಾಸ್ಕೋ ಮಾರ್ಟಿಸ್ ಎಂಬುವವರು ಈ ನೃತ್ಯವನ್ನು ಸಂಯೋಜನೆ ಮಾಡಿದ್ದಾರೆ. ವಿಶೇಷ ಎಂದರೆ, ಅವರು ನಾನಂತೂ ನಿರ್ಲಜ್ಜೆಯಿಂದ ಈ ಹಾಡಿನ ಕ್ರೆಡಿಟ್ಟನ್ನು ನನಗೆ ಕೊಡಬೇಕು. ಎಲ್ಲರ ಫೋಕಸ್ ವಿಕ್ಕಿ ಕೌಶಲ್ ಮೇಲಿದೆ ಎಂದು ನೇರಾನೇರವಾಗಿ ಆರೋಪಿಸಿದರು.

'ಒಂದು ಹಾಡು ಸುಮ್ಮನೆ ಹಿಟ್ ಆಗುವುದಿಲ್ಲ. ಅದನ್ನು ಆಯಾ ರೀತಿ ವಿನ್ಯಾಸ ಮಾಡುವುದು ದೊಡ್ಡ ಸೃಜನಶೀಲತೆ. ವಿಕ್ಕಿ ಕೌಶಲ್ ಮಾಡಿದ ನೃತ್ಯ ಯಾವ ರೀತಿ ಇರಬೇಕು, ಯಾವ ಕೋನದಲ್ಲಿ ಆ ದೃಶ್ಯ ಚಿತ್ರೀಕರಿಸಬೇಕು ಎನ್ನುವ ಕುರಿತು ಸಾಕಷ್ಟು ತಲೆ ಕೆಡಿಸಿಕೊಂಡಿರುತ್ತೇವೆ. ಈ ಮಾಧ್ಯಮ ಸೀದಾ ಅವರ ಮೇಲಷ್ಟೇ ಫೋಕಸ್ ಲೈಟ್ ಹಾಕಿಬಿಡುತ್ತವೆ. ಎಲ್ಲರ ಶ್ರಮಕ್ಕೆ ಬೆಲೆ ಹಾಗೂ ಜನಮನ್ನಣೆ ಸಿಗಬೇಕು' ಎನ್ನುವುದು ಬಾಸ್ಕೋ ಆಗ್ರಹ. ವಿಕ್ಕಿ ಕೌಶಲ್ ಅವರೂ ಈ ಆಗ್ರಹವನ್ನು ಅನುಮೋದಿಸಿದ್ದಾರೆ.

'ತೌಬ ಹಾಡಿನ ಸ್ಟೆಪ್‌ಗಳು ನಾನು ಮನೆಯಿಂದ ತಂದಿದ್ದಲ್ಲ. ಬಾಸ್ಕೋ ಕಲಿಸಿದ್ದು. ಅದರ ಕ್ರೆಡಿಟ್ಟು ಅವರಿಗೆ ಸಲ್ಲಬೇಕು' ಎಂದು ವಿಕ್ಕಿ ತಮ್ಮ ಬೆಂಬಲ ಸೂಚಿಸಿದ ಮೇಲೆ ಬಾಸ್ಕೋ ಅವರಿಗೆ ಸಮಾಧಾನ ಆದಂತಿದೆ.



# ಪೋಸಿಗಾಗಿ ಬೆನ್ನಿಗೆ ಬಿದ್ದಾಗ...

ತಾಪ್ಸಿ ಪನ್ನು ಎಲ್ಲರಂತಲ್ಲದ ನಟಿ. ಅವರಿಗೆ ತಾರಾ ವರ್ಚಸ್ಸನ್ನು ಉಜ್ಜುವುದು ತಿಳಿದಿಲ್ಲ. ಹಾಗೆಂದು ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳು ಅವರ ಕಾಲು ಎಳೆದರೂ ಅವರು ಅಹುದಹುದು ಎನ್ನುವಂತೆ ತಲೆ ಆಡಿಸಿದರಷ್ಟೆ. ಅವರು ತಮ್ಮ ಬದುಕಿನ ಕೆಲವು ಸಣ್ಣಪುಟ್ಟ ಮಜಾ ವಿಷಯಗಳನ್ನು ಹಂಚಿಕೊಳ್ಳುವುದೇ ಸೊಗಸು.

ಮುಂಬೈ ವಿಮಾನ ನಿಲ್ದಾಣದಲ್ಲಿ ಈಗ ಕ್ಯಾಮೆರಾಮನ್‌ಗಳ ಹಿಂಡು ಜಮಾಯಿಸಿರುತ್ತದೆ. ಯಾವ ನಟ ಅಥವಾ ನಟಿ ಅಲ್ಲಿಗೆ ಹೋಗುತ್ತಾರೆ ಅಥವಾ ಬರುತ್ತಾರೆ ಎನ್ನುವ ಮಾಹಿತಿಯನ್ನು ಸುದ್ದಿಮಿತ್ರ ಕ್ಯಾಮೆರಾಮನ್‌ಗಳಿಗೆ ತಲುಪಿಸುವ ಪ್ರಚಾರಕರ್ತರೂ ಇದ್ದಾರೆನ್ನಿ. ಅಂತಹವರ ಹಂಗು ಯಾವತ್ತೂ ತನಗೆ ಇಲ್ಲ ಎಂದು ತಾಪ್ಸಿ ಹೇಳಿದರು. ಹಾಗಿದ್ದೂ ಒಂದೊಮ್ಮೆ ಅವರು ಅನುಭವಿಸಿದ ಕಿರಿಕಿರಿಯ ಪ್ರಸಂಗವನ್ನು ಹಂಚಿಕೊಂಡರು.

ಅವರು ವಿಮಾನದಿಂದ ಇಳಿದರು. ಒಂದು ಟ್ರ್ಯಾಕ್ ಪ್ಯಾಂಟ್ ಹಾಗೂ ಎಂಥದ್ದೋ ಒಂದು ಟೀ ಶರ್ಟ್ ಧರಿಸಿದ್ದರು. ಹೊರಗಡೆ ಪಾಪರಾಜಿಗಳ ಹಿಂಡು ನೋಡಿ, ಅವರಿಂದ ತಪ್ಪಿಸಿಕೊಳ್ಳಲು ಎಂದೇ ಒಂದು ಕಾಫಿ ಶಾಪ್ ಒಳಹೊಕ್ಕರು. ನಿಧಾನವಾಗಿ ಕಾಫಿ ಕುಡಿಯುತ್ತಾ, ಕ್ಯಾಮೆರಾಮನ್‌ಗಳು ಹೊರಟ ನಂತರ ಅಲ್ಲಿಂದ ಹೊರಡಬೇಕೆಂದು ನಿರ್ಧರಿಸಿದರು. ಸುಮಾರು ಮುಕ್ಕಾಲು ತಾಸು ಆದರೂ ಯಾರೂ ಕದಲಲಿಲ್ಲ. ಬ್ಯಾಗ್‌ನಿಂದ ಒಂದು ಜಾಕೆಟ್ ತೆಗೆದು ಧರಿಸಿದರು. ಕನ್ನಡಿಯಲ್ಲಿ ಒಮ್ಮೆ ಮುಖ ನೋಡಿಕೊಂಡರು. ಹೊರಗೆ ಹೋಗಿ, ತಾವೇ ತಮ್ಮ ಕಾರು ಚಲಾಯಿಸಿಕೊಂಡು ಹೋಗುವುದು ಅವರ ರೂಢಿ. ಇನ್ನು ಅದನ್ನೂ ಕ್ಯಾಮೆರಾಮನ್‌ಗಳು ಸುದ್ದಿ ಮಾಡುತ್ತಾರೆ ಎಂದು ಒಂದು ಟ್ಯಾಕ್ಸಿ ಬುಕ್ ಮಾಡಿದರು. ಮೆಲ್ಲಗೆ ಅಲ್ಲಿಂದ ಹೊರಟರು. ಕ್ಯಾಮೆರಾಮನ್‌ಗಳ ಬೇಡಿಕೆಗೆ ತಕ್ಕಂತೆ ಪೋಸ್ ಕೊಟ್ಟರು. ಟ್ಯಾಕ್ಸಿ ಹತ್ತುವವರೆಗೆ ಫ್ಲ್ಯಾಷ್ ಬೆಳಕು ನೋಡಿ ನೋಡಿ ಅವರಿಗೆ ಉಸ್ಸೆನ್ನಿಸಿತು.

ಸುಮ್ಮನೆ ಕ್ಯಾಮೆರಾಮನ್‌ಗಳಿಗೆ ಪೋಸ್ ಕೊಟ್ಟು ಹೀಗೆ ಕ್ಲಿಕ್ಕಿಸಿಕೊಂಡರೆ ತಮಗೆ ಸಿನಿಮಾ ಅವಕಾಶ ಏನೂ ಸಿಗುವುದಿಲ್ಲ ಎನ್ನುವುದು ಅವರ ನಿಲುವು.

ಈ ಬದುಕಿನಲ್ಲಿ ಸರಳವಾಗಿರುವುದು ಕೂಡ ಎಷ್ಟು ಕಷ್ಟ ನೋಡಿ ನೋಡಿ ಎಂಬ ಅವರ ನಗು ಬೆರೆತ ನುಡಿಗೆ ಅರ್ಥವಿದೆ.